ಕೆಲವು ದಿನಗಳು ಕಳೆದ ಬಳಿಕ ಮೋಹನ ಬೆಂಗಳೂರಿಗೆ ಬಂದಿದ್ದ. ಅಂದುಕೊಂಡಂತೆಯೇ ಮೇದಿನಿಯೊಂದಿಗೆ ಭೇಟಿಗೆ ಸ್ಥಳ, ಸಮಯವೂ ನಿಗದಿಯಾಗಿತ್ತು. ಈ ಬಾರಿ ಅವರಿಬ್ಬರೂ ಸಂಧಿಸುವ ಸ್ಥಳ ಬ್ರಿಗೇಡ್ ಗೇಟ್‌ವೇ ಬಳಿಯ 'ಓರಾಯನ್ ಮಾಲ್'ನ ಪರಿಸರವಾಗಿತ್ತು. ಅದು ಅವನಿಗೆ ಇಷ್ಟದ ಸ್ಥಳವೂ ಆಗಿತ್ತು. ಅಲ್ಲದೇ ಅವಳು ಕೂಡ ಅದಕ್ಕೆ ಸಮ್ಮತಿಸಿದ್ದಳು.

ಸಂಜೆ ಐದು ಗಂಟೆ ಸಮಯ. ಗಗನ ಚುಂಬಿ ಕಟ್ಟಡಗಳು, ವಿಶಾಲ ಆವರಣದಲ್ಲಿ ಬಗೆಬಗೆಯ ಆಲಂಕಾರಿಕ ಗಿಡ ಮರಗಳು, ವಿಸ್ತಾರವಾದ ಕೃತಕ ನೀರಿನ ಹೊಂಡ, ಅದರಿಂದ ಮೇಲಕ್ಕೆ ಚಿಮ್ಮುವ ಕಾರಂಜಿಗಳು, ಇದಕ್ಕೆಲ್ಲಾ ಸಾಕ್ಷಿಯಾಗಿ ಮಧುರ ಸಂಗೀತ ಹೊಮ್ಮಿಸುವ ಪಕ್ಷಿಗಳ ಕಲರವ, ತುಂಡುಡುಗೆ ತೊಟ್ಟ ವರ್ಣರಂಜಿತ ತರುಣಿಯರು, ಅವರನ್ನು ಆವರಿಸಿಕೊಂಡ ತರುಣರು... ಹೀಗೆ ಸಂಜೆಯಾಗುತ್ತಿದ್ದಂತೆ ಅಲ್ಲಿಯ ಮಾಯಾ ಜಗತ್ತು ಅನಾವರಣಗೊಳ್ಳತೊಡಗಿತು. ಮಾಲ್‌ನ ಎಡ ಭಾಗದಲ್ಲಿ ಕುಳಿತು ಆ ಪರಿಸರವನ್ನೆಲ್ಲಾ ಕಣ್ಣು ತುಂಬಿಕೊಳ್ಳಲೆಂದೇ ನಿರ್ಮಿಸಿದಂತಿರುವ ಎತ್ತರೆತ್ತರದ ಕಟ್ಟೆಗಳು ಮತ್ತು ಅವನ್ನು ಆವರಿಸಿರುವ ಮೃದುವಾದ ಹುಲ್ಲು ಹಾಸಿನ ಮೇಲೆ ಕುಳಿತು ಮೋಹನ ಮೇದಿನಿಯ ಆಗಮನಕ್ಕಾಗಿಯೇ ಕಾಯುತ್ತಿದ್ದ. ಹೇಳಿದ ಸಮಯಕ್ಕೆ ಸರಿಯಾಗಿ ಅವಳು ಅದೇ ಸ್ಥಳದಲ್ಲಿ ಪ್ರತ್ಯಕ್ಷವಾದಳು. ಅವಳನ್ನು ನೋಡುತ್ತಿದ್ದಂತೆ ಅವನಿಗೆ ಇನ್ನಿಲ್ಲದ ರೋಮಾಂಚನ, ಆನಂದ! ಈ ಬಾರಿ ಅವಳು ರಕ್ತವರ್ಣದ ಸ್ಲೀವ್‌ಲೆಸ್ ಚೂಡಿ, ಅದೇ ವರ್ಣದ ಸ್ವಲ್ಪ ತಿಳಿ ಬಣ್ಣದ ಲೆಗ್ಗಿಂಗ್ ಧರಿಸಿದ್ದಳು. ಸ್ವಲ್ಪ ದೂರದಲ್ಲಿ ಹೆಜ್ಜೆ ಹಾಕುತ್ತ ತನ್ನೆಡೆಗೆ ಬರುತ್ತಿದ್ದರೆ, ಅವನಿಗೆ ಅಚ್ಚರಿಯೊಂದನ್ನು ಕಂಡಂತೆ ಬೆರಗು! ಸುಮಾರು ಒಂದು ವರ್ಷದ ಅವಧಿಯಲ್ಲಿ ಅವಳಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದವು. ಹತ್ತಿರ ಹತ್ತಿರಕ್ಕೆ ಬರುತ್ತಿದ್ದಂತೆ ಅವನಿಗೆ ಅವಳ ದೇಹ ಮೋಹಕ ಶಿಲ್ಪದಂತೆ, ಮುಖ ಅರಳಿದ ಪುಷ್ಪದಂತೆ ಗೋಚರಿಸಿತು. ಅದನ್ನೆಲ್ಲ ಕಂಡು ಅವಳನ್ನು ಹೇಗೆ ಎದುರಿಸುವುದೋ ಎಂಬುದು ಅವನಿಗೆ ತಿಳಿಯದೆ ತಳಮಳವಾಯಿತು.



ಅವಳು ಹತ್ತಿರ ಬರುತ್ತಿದ್ದಂತೆ ಎದ್ದು ನಿಂತು, 'ಬನ್ನಿ, ನೀವೆಲ್ಲಿ ನನ್ನ ಹುಡುಕ್ತಿರೊ ಅನ್ಕೊಂಡೆ. ಸರಿಯಾದ ಜಾಗಕ್ಕೆ ಬಂದ್ರಿ' ಎಂದ.

ಅದಕ್ಕವಳು ಮುಗುಳ್ನಕ್ಕು, 'ಹಾಗೇನಿಲ್ಲಾ... ಈ ಜಾಗ ನನಗೆ ಹೊಸದೇನಲ್ಲ... ತುಂಬಾ ಹೊತ್ತಾಯ್ತಾ ನೀವು ಬಂದು?' ಎಂದಳು.

'ಇಲ್ಲ, ಒಂದ್ ಹತ್ತು ನಿಮಿಷ ಆಗಿರಬಹುದು' ಎಂದಾಗ ಇಬ್ಬರೂ ಹುಲ್ಲು